ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಇ, ಬೆಂಗಳೂರು ವಿಭಾಗ,
ಲೋಇ ಅನೆಕ್ಸ್ ಕಟ್ಟಡ 2ನೇ ಮಹಡಿ
ಕೆ.ಆರ್.ವೃ, ಬೆಂಗಳೂರು 01

ದೂರವಾಣಿ : 080–22133370
ಫ್ಯಾಕ್ಸ್: 080–22133365
ಇ ಮೇಲ್:eepwdbngdn@yahoo.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾನಿಇಂ:ಬೆಂವಿ:ಎಇ–3:ಕಟ್ಟಡ.ಸುರಕ್ಷತಾ:2021–22 | 5132   ದಿ: 20/1/22

"ನೊಂದಾಯಿತ ಅಂಚೆ ಮತ್ತು ಸ್ವೀಕೃತಿ"

ರವರಿಗೆ:–

**Principal,**
**Carmel Jyothi Educational**
**& Cultural Association,**
**Rojipura, Ward-2,**
**Doddaballapura – 561203.**

ಮಾನ್ಯರೇ,

ವಿಷಯ:– ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ನಗರದ ರೋಜೀಪುರದಲ್ಲಿರುವ ಕಾರ್ಮೆಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:–
1. ದಿನಾಂಕ: 19.09.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
2. ತಮ್ಮ ಮನವಿ ದಿನಾಂಕ:– 24.03.2021.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 10.11.2021
4. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಲೋ.ಇ 59 ಬಿಇಡಿ 2019, ದಿನಾಂಕ: 20.11.2021.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: 654/2021–22 ದಿನಾಂಕ: 28.12.2021

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ನಗರದ ರೋಜೀಪುರದಲ್ಲಿರುವ ಕಾರ್ಮೆಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಿರುತ್ತೀರಿ.

ರಿಟ್ ಪಿಟೀಷನ್ (ಸಿವಿಲ್) ಸಂ: 484 (2004) ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಲಾದ ಜಡ್ಜ್‌ಮೆಂಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಶಾಲಾ/ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ **"Structurally Stable Certificate"** ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಸಭಾ ನಡವಳಿಯ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural Evaluation) ಮೌಲ್ಯಮಾಪನ ಮಾಡಿಸಿ National Building code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿ ಈ ಕೆಳಕಂಡಂತೆ ವರದಿ ನೀಡಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕು, ಕಾರ್ಮೆಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ ಶಾಲಾ ಕಟ್ಟಡವನ್ನು 2004ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ಕಟ್ಟಡವು ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯನ್ನು ಒಳಗೊಂಡಿರುತ್ತದೆ.

ದಿನಾಂಕ 25.10.2021 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಇ., **ದೊಡ್ಡಬಳ್ಳಾಪುರ** ಉಪ-ವಿಭಾಗ ರವರು **ಕಾರ್ಮಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ** ರವರ ನೋಂದಾಯಿತ ಸ್ಟ್ರಕ್ಚರಲ್ ಇಂಜಿನಿಯರ್‌ರವರೊಂದಿಗೆ ಉಪವಿಭಾಗದ ತಾಂತ್ರಿಕ ವರ್ಗವು ಚರ್ಚಿಸಿ, ಕಟ್ಟಡವು ಸದೃಢತೆಯಿಂದ ಇರುವುದು ಕಂಡುಬಂದಿರುತ್ತದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ, **ದೊಡ್ಡಬಳ್ಳಾಪುರ** ಉಪವಿಭಾಗ ರವರು ಉಲ್ಲೇಖ(5)ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ, **ದೊಡ್ಡಬಳ್ಳಾಪುರ** ಉಪವಿಭಾಗ ರವರು ಉಲ್ಲೇಖ(5)ರ ಪತ್ರದಲ್ಲಿ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ದಿನಾಂಕ 30.12.2021 ರಂದು NABL Accredited Laboratory as per ISO/IEC 17025 ಹೊಂದಿರುವ **M/s Karnataka Test House Pvt. Ltd** ರವರೊಂದಿಗೆ Portable ultrasonic non-destructive Digital indicating Tester ಮುಖಾಂತರ ಪರೀಕ್ಷೆಗಳನ್ನು ಕೈಗೊಂಡು, ಸಮಾಲೋಚಕರೊಂದಿಗೆ ಉಪ-ವಿಭಾಗದ ತಾಂತ್ರಿಕ ವರ್ಗವು ನಡೆಸಿರುವ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡುಬಂದಿರುತ್ತದೆಂದು ವರದಿ ಮಾಡಿರುತ್ತಾರೆ.

**ಕಾರ್ಮಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ** ಶಾಲಾ ರವರು ರೂ. 11400.00 (ರೂ ಮೂರು ಸಾವಿರದ ನಾಲ್ಕು ನೂರು ಮಾತ್ರ) ಗಳ ಮೌಲ್ಯಮಾಪನ ಶುಲ್ಕವನ್ನು Union Bank, Doddabelavangala Branch, DD No : 905193 Dt : 07.01.2022 ರಲ್ಲಿ ಪಾವತಿಸಿರುತ್ತಾರೆ.

- **ಕಾರ್ಮಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ** ರವರ ಮನವಿ ಪತ್ರದಲ್ಲಿ ಸದರಿ ಕಟ್ಟಡವನ್ನು ದೊಡ್ಡಬಳ್ಳಾಪುರ ನಗರದ ರೋಜಿಪುರದಲ್ಲಿ ನಿರ್ಮಿಸಲಾಗಿರುವುದಾಗಿ ತಿಳಿಸಿರುತ್ತಾರೆ.
- ದೊಡ್ಡಬಳ್ಳಾಪುರ ನಗರಸಭೆರವರ ವತಿಯಿಂದ ನಕ್ಷೆಯಂತೆ ಸದರಿ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ ಎಂದು ಹಾಗೂ ಈ ಕೆಳಗಿನ ಪ್ರಮಾಣ ಪತ್ರಗಳನ್ನು ಸಂಸ್ಥೆಯವರು ಸಲ್ಲಿಸಿರುತ್ತಾರೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ, ದೊಡ್ಡಬಳ್ಳಾಪುರ ಉಪವಿಭಾಗ ರವರು ವರದಿ ನೀಡಿರುತ್ತಾರೆ.
- **Sri. T.G Venugopal, M.E, CE (IND)** ರವರು ನೀಡಿರುವ Certificate for subsurface investigation ಪ್ರಮಾಣ ಪತ್ರ.
- **Sri. T.G Venugopal, M.E, CE (IND), Reg: Engr (E-35/84-85) 10/2, Kasturba Road, Bangalore** ರವರು ನೀಡಿರುವ Certificate for completed structural design work as per structural safety requirements ಪ್ರಮಾಣ ಪತ್ರ.
- **Sri. T.G Venugopal, M.E, CE (IND), Reg: Engr (E-35/84-85) 10/2, Kasturba Road, Bangalore** ರವರು ನೀಡಿರುವ Certificate for Completed Work by Builder / Constructor ಪ್ರಮಾಣ ಪತ್ರ.
- **Sri. T.G Venugopal, M.E, CE (IND)** ರವರು ನೀಡಿರುವ Certificate for supervision of work ಪ್ರಮಾಣ ಪತ್ರ.
- **Sri. T.G Venugopal, M.E, CE (IND),** ರವರು ನೀಡಿರುವ Completion certificate ಪ್ರಮಾಣ ಪತ್ರ.
- Ultrasonic Pulse Velocity Test
  Conducting Ultrasonic pulse velocity test for compressive strength of in-situ concrete on Columns, Beams and Slab at Critical points using "PUNDIT 6" (Portable ultrasonic non-destructive Digital indicating Tester) equipment ಮುಖಾಂತರ ಪರೀಕ್ಷೆಯನ್ನು **M/s Karnataka Test House Pvt. Ltd** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ., ದೊಡ್ಡಬಳ್ಳಾಪುರ ಉಪವಿಭಾಗ ರವರು ವರದಿಸಿರುತ್ತಾರೆ.
- Recognizance, visual inspection of Building, cracks, distress etc. ಪರೀಕ್ಷೆಯನ್ನು **M/s Karnataka Test House Pvt. Ltd** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ., ದೊಡ್ಡಬಳ್ಳಾಪುರ ಉಪವಿಭಾಗ ರವರು ವರದಿಸಿರುತ್ತಾರೆ.

ಸದರಿ ಕಟ್ಟಡದಲ್ಲಿ NBC Code 2016 ರನ್ವಯ 25 ಹೆಣ್ಣು ಮಕ್ಕಳಿಗೆ 1 ರಂತೆ ಹಾಗೂ 50 ಗಂಡು ಮಕ್ಕಳಿಗೆ 1 ಮತ್ತು ಪುರುಷರಿಗೆ 1 ರಂತೆ ಶೌಚಾಲಯಗಳನ್ನು ನಿರ್ಮಿಸಬೇಕಾಗಿರುತ್ತದೆ. ಆದರೆ ಶಾಲೆಯಲ್ಲಿ 31 ಭೋದನಾ ಕೊಠಡಿಗಳು, 908 ಮಕ್ಕಳಿದ್ದು, ನೆಲಮಹಡಿಯಲ್ಲಿ ಕೇವಲ 05 ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಇ., ದೊಡ್ಡಬಳ್ಳಾಪುರ ಉಪವಿಭಾಗ ರವರು ವರದಿಸಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **M/s Karnataka Test House Pvt. Ltd & Sri. T.G Venugopal, M.E, CE (IND)** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ನೀಡಿರುವ ವರದಿ ಹಾಗೂ ಕಟ್ಟಡವು **Structurally Stable** ಇರುವುದಾಗಿ ಪರೀಕ್ಷಾವರದಿಗಳಿಂದ ಕಂಡುಬಂದಿರುವುದರಿಂದ, ಈ ಕೆಳ ಸಹಿ ಮಾಡಿರುವವರು ದಿ: 22.12.2021 ರಂದು ಖುದ್ದಾಗಿ ಪರಿವೀಕ್ಷಿಸಿದ್ದು, **ಕಾರ್ಮಲ್ ಜ್ಯೋತಿ ಎಜುಕೇಷನಲ್ ಮತ್ತು ಸಾಂಸ್ಕೃತಿಕ ಸಂಸ್ಥೆ** ಕಟ್ಟಡವು **Structurally Stable** ಇದೆ ಎಂದು ಈ ಕೆಳಕಂಡ ಷರತ್ತಿಗೊಳ್ಳಪಟ್ಟು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

1. NBC Code 2016 ರನ್ವಯ ಅಗತ್ಯ ಶೌಚಾಲಯಗಳನ್ನು ಪ್ರತಿ ಮಹಡಿಯಲ್ಲೂ ನಿರ್ಮಿಸುವುದು.
2. ಕಾರಿಡಾರ್‌ನಲ್ಲಿ ಗ್ರಿಲ್‌ಅನ್ನು ಶಾಶ್ವತವಾಗಿ ಅಳವಡಿಸಿದ್ದು, ಈ ಬಗ್ಗೆ ಅಗ್ನಿಶಾಮಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.
3. ಕೆಲವು ಕೊಠಡಿಗಳ ಗೋಡೆಗಳಲ್ಲಿ ಹಾಗೂ ಸೀಲಿಂಗ್‌ನಲ್ಲಿ ಕಂಡುಬಂದಿರುವ ಏರ್ ಕ್ರಾಕ್‌ಗಳನ್ನು ಶೀಘ್ರವಾಗಿ ಮುಚ್ಚಲು ಕ್ರಮ ಕೈಗೊಳ್ಳುವುದು.
4. ಮೊದಲನೇ ಹಾಗೂ ಎರಡನೇ ಮಹಡಿಯ ಕಾರಿಡಾರ್‌ನ ಮೇಲ್ಭಾವಣಿಯಲ್ಲಿ ತೇವಾಂಶವು ಕಂಡುಬಂದಿದ್ದು, ಶೀಘ್ರವಾಗಿ ದುರಸ್ಥಿಪಡಿಸುವುದು.

ಉಳಿದಂತೆ, ಪ್ರಸ್ತಾಪಿತ ಕಟ್ಟಡದ Non - Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮನಶ್ಶಾಸ್ತ್ರಜ್ಞ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಲೋ.ಇ., ಬೆಂಗಳೂರು ವಿಭಾಗ,
ಬೆಂಗಳೂರು.